# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 21.05.2022 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21/21-09-2020 ರ ಆದೇಶದಂತೆ ದಿನಾಂಕ: 21.05.2022 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜೋಗುಪಾಳ್ಯ ವಾರ್ಡ್ ಸಂಖ್ಯೆ-89 ಸಭೆ ವಾರ್ಡ್ ಕಛೇರಿ ಗುಂಡಪ್ಪ ಪಾರ್ಕ್ ಹತ್ತಿರ ಕೇಂಬ್ರಿಡ್ಜ್ 1ನೇ ಬೀದಿ ಜೋಗುಪಾಳ್ಯ, ಬೆಂಗಳೂರು - ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

### ಸಭೆಗೆ ಹಾಜರಿದ್ದವರ ವಿವರಗಳು

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
2) ಮಾಜಿ ಮಹಾಪೌರರಾದ ಶ್ರೀ ಗೌತಮ್ ರವರು ಸಭೆಗೆ ಹಾಜರಿದ್ದರು.
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ, ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ಘನತಾಜ್ಯ ವಿಭಾಗ, ಅಧಿಕಾರಿಗಳು, ಬೆಸ್ಕಾಂ ಮತ್ತು BWSSB ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರಾದ, ಶ್ರೀಮತಿ ಆಶಾ ಆಲ್ವಿನ್, ಶ್ರೀಮತಿ ವಿಜಯಲಕ್ಷ್ಮೀ, ಶ್ರೀ ಹೇಮಂತ್‌ನಾಗ್, ಶ್ರೀಮತಿ ಗಾಯತ್ರಿ, ಶ್ರೀ ಉಮೇಶ್ ಮತ್ತು ಶ್ರೀ ಗಣೇಶ್ ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯರು ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ವಾರ್ಡ್ ಸಮಿತಿ ಸಭೆಯಲ್ಲಿ ನೀಡಿರುವ ಈ ಕೆಳಕಂಡ ವಾರ್ಡಿನ ಸಮಸ್ಯಗಳ ಬಗ್ಗೆ ಚರ್ಚಿಸಲಾಯಿತು.

1. ಮೊದಲನೆದಾಗಿ ಹಿಂದಿನ ವಾರ್ಡ್ ಸಮಿತಿ ಸಭೆಯ ನಡವಳಿಯಲ್ಲಿ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಓದಿದರು ಅದರಲ್ಲಿ ಕೆಲವೊಂದು ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೆ ಕ್ರಮ ವಹಿಸಲು ಸೂಚಿಸಿದರು ಉದಾಹರಣೆಗೆ ಆಟೋ ಕಸದ ಚಾಲಕರು ಚಾನಲ್ ರಸ್ತೆಯ ಮೋರಿಯಲ್ಲಿ ಕಸವನ್ನು ಹಾಕುತ್ತಿರುವ ಬಗ್ಗೆ ಕೀರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಮುಂದೆ ಇದು ನಡೆಯದೆ ಇರುವಂತೆ ನೋಡಿಕೊಳ್ಳಲು ಎಚ್ಚರಿಕೆಯನ್ನು ನೋಡಲ್ ಅಧಿಕಾರಿಯವರು ನೀಡಿದರು, ಮತ್ತು BWSSB ಅಧಿಕಾರಿಗಳಿಗೆ ವಾರ್ಡಿನಲ್ಲಿ ಸಮರ್ಪಕವಾಗಿ ಕಾವೇರಿ ನೀರನ್ನು ಪೂರೈಸಲು ಹಾಗೂ ವಾಲ್‌ಮೆನ್‌ಗೆ ಎಚ್ಚರಿಕೆ ನೀಡಲು ಸೂಚಿಸಲಾಯಿತು.
2. ಮಾಜಿ ಮಹಾಪೌರರಾದ ಶ್ರೀ ಗೌತಮ್ ರವರು ಮಾತನಾಡುತ್ತಾ ಕೆಳಕಂಡ ವಿಷಯಗಳನ್ನು ಚರ್ಚಿಸಿದರು

- ಬಿಬಿಎಂಪಿಯ ಒಳಚರಂಡಿ (Storm Water Drain) ವಿಭಾಗದ ಶ್ರೀಮತಿ ರೇಣುಕಾ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಶ್ರೀ ಗೌತಮ್ ರವರು ಮಾತನಾಡುತ್ತಾ ಎರಡು ದಿವಸದ ಹಿಂದೆ ಬಾರಿ ಮಳೆ ಬಂದು ಮೈನ್ ಚಾನಲ್ ರಸ್ತೆಯಲ್ಲಿರುವ ರಾಜ ಕಾಲುವೆಯ ನೀರು ರಸ್ತೆಗೆಲ್ಲ ಹರಿದು ಬಂದು ಚನಲ್ ರಸ್ತೆಯಲ್ಲಿರುವ ಮನೆಗಳಗೆಲ್ಲ ನೀರು ನುಗ್ಗಿರುತ್ತದೆ. ಇದರಿಂದ ನಾಗರಿಕರಿಗೆ ಬಹಳ ತೊಂದರೆಯಾಗಿರುತ್ತದೆ. ನಾನು ಮರಳು ಮುಟೆಗಳನ್ನು ರಾಜಕಾಲುವೆಗೆ ತಡೆ ಗೊಡೆಯನ್ನಾಗಿ ಇಡಲು ಕೋರಿರುತ್ತೇನೆ ಆದರೆ ತಾವು ಆ ಕೆಲಸವನ್ನು ಮಾಡಿರುವುದಿಲ್ಲ ಇದರಿಂದ ಜನರಿಗೆ ಬಹಳ ಅನಾನುಕೂಲವಾಗಿರುತ್ತದೆ ಕೂಡಲೆ ರಾಜಕಾಲುವೆಯ ಹುಳನ್ನು ತೆಗೆದು ಬಿರುಕು ಬಿಟ್ಟಿರುವ ತಡೆಗೊಡೆಯನ್ನು ಸರಿಪಡಿಸಲು ಸೂಚಿಸಿರುತ್ತಾರೆ.
- ವಾರ್ಡಿನ ರಸ್ತೆಗಳ ಪಕ್ಕದಲ್ಲಿ ಬಿದ್ದಿರುವ ಮರಗಳ ತುಂಡನ್ನು ಕೂಡಲೆ ಬಿಬಿಎಂಪಿ ಅರಣ್ಯ ವಿಭಾಗಕ್ಕೆ ಸೂಚಿಸಿರುತ್ತಾರೆ.
- ಜಿ ಮುಖ್ಯ ಬೀದಿಯ ಜೋಗುಪಾಳ್ಯ ಹೆಬ್ಬಾಗಿಲಲ್ಲಿ ನಿರ್ಮಿಸಿರುವ ಕಾಮಾನಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಸರಿನ ನಾಮಫಲಕವನ್ನು ಹಾಕಲು ಸೂಚಿಸಿರುತ್ತಾರೆ. ಹೆಬ್ಬಾಗಿಲನ್ನು ನಿರ್ಮಿಸಲು ಬಿಬಿಎಂಪಿಯಿಂದ ಜಾಬ್‌ಕೋಡು ಸಹಾ ನೀಡಲಾಗಿರುತ್ತದೆ. ಹಿರಿಯ ನಾಗರಿಕ ಸೇವಾ ಸಮಿತಿಯ ನಾಮಫಲಕವನ್ನು ಸಹಾ ಕಮಾನಿನಲ್ಲಿ ಹಾಕಲು ಸೂಚಿಸಿರುತ್ತಾರೆ.
- ವಾರ್ಡಿನ ಕಾಮಗಾರಿ ಹಾಗೂ ಇತರೆ ಕೆಲಸಗಳಗೆ ಮುಖ್ಯವಾಗಿ ವಾರ್ಡಿಗೆ ಬೇಕಾಗಿರುವ ಒಂದು ಕ್ರೇನ್‌ನನ್ನು ಮೇಲಾಧಿಕಾರಿಯವರ ಗಮನಕ್ಕೆ ತರಲು ಶ್ರೀ ಗೌತಮ್‌ರವರು ಹೇಳಿದರು.
- ಮಾಜಿ ಮಹಾಪೌರರು ಶ್ರೀ ಗೌತಮ್ ರವರು ಮಾತನಾಡುತ್ತಾ ಮೈನ್ ಚಾನಲ್ ರಸ್ತೆ ಹಾಗೂ ಕೇಂಬ್ರಿಡ್ಜ್ ರಸ್ತೆಯಲ್ಲಿ ನಡೆದಿರುವ ಕಾಮಗಾರಿಗೆ ಸಂಬಂಧಿಸಿದಂತೆ ಯಾವುದೇ ಅವ್ಯವಹಾರ ನಡೆದಿರುವುದಿಲ್ಲವೆಂದು ಹಾಗೂ ಟೆಂಡರ್ ಕಾಮಗಾರಿಗೆ ಸರ್ಕಾರದ ನಗರಾಭಿವೃದ್ಧಿಯಿಂದ ಅನುಮತಿ ಪಡೆದು ಕಾಮಗಾರಿಯನ್ನು ಮಾಡಲಾಗಿರುತ್ತದೆ. ಈ ಕಾಮಗಾರಿಯು ಮೂವತೊಂಬತ್ತು ಕೋಟಿ ಮೊತ್ತವಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಕಡತದ ಬಗ್ಗೆ ಮಾಹಿತಿಯನ್ನು ನೀಡಲು ಸಹಾಯಕ ಕಾರ್ಯಪಾಲಕರಾದ ಶ್ರೀ ಮೂರ್ತಿ ರವರಿಗೆ ಕೇಳಿದರು. ಇದಕ್ಕೆ ಉತ್ತರಿಸುತ್ತಾ ಶ್ರೀ ಮೂರ್ತಿ ರವರು ಪ್ರಸ್ತುತ ಸಂಬಂಧಿಸಿದ ಕಡತವು ನಗರಾಭಿವೃದ್ಧಿ ಇಲಾಖೆಯಲ್ಲಿದ್ದು ಸದರಿ ಕಾಮಗಾರಿಯ ವರದಿಯನ್ನು ಮಾಜಿ ಮಹಾಪೌರರಿಗೆ ನೀಡುವುದಾಗಿ ತಿಳಿಸಿದರು.
- ಮಾಜಿ ಮಹಾಪೌರರು ಜೋಗುಪಾಳ್ಯ ವಾರ್ಡಿನಲ್ಲಿರುವ ಸಿಟಿ ನೆಸ್ಟ್ ಹಾಗೂ ಶಾಮಣ್ಣಗೌಡ ರಸ್ತೆಯಲ್ಲಿ ಹಾಗೂ ಅಕ್ಕಪಕ್ಕ ರಾತ್ರಿಯ ಹೊತ್ತು ಸುಮಾರು ೨೦ ರಿಂದ ೩೦ ಹುಡುಗರು ಗಾಂಜಾ ಸೇವಿಸುತ್ತಿರುತ್ತಾರೆ ಇದರಿಂದ ಅಲ್ಲಿ ವಾಸಿಸುವ ಅಕ್ಕಪಕ್ಕದ ನಾಗರಿಕರಿಗೆ ಸಮಸ್ಯ ಉಂಟಾಗಿರುತ್ತದೆ ಕೂಡಲೆ ಅರಕ್ಷಕರು ಇದರ ಬಗ್ಗೆ ಕ್ರಮತೆಗೆದುಕೊಳ್ಳಬೇಕೆಂದು ಸೂಚಿಸಿರುತ್ತಾರೆ.
- ವಾರ್ಡಿನಲ್ಲಿರುವ ಸುಬ್ರಮಣ್ಯಸ್ವಾಮಿ ದೇವಾಸ್ಥಾನದ ಆವರಣದಲ್ಲಿರುವ ಚತ್ರವನ್ನು ಸುಚ್ಛಿತ್ವವಾಗಿ ಇದರ ಬಗ್ಗೆ ದೇವಾಸ್ಥಾನದ ಆಡಳತ ಮಂಡಳಯ ಗಮನಕ್ಕೆ ತರಬೇಕೆಂದು ಹಾಗೂ ಮುಂದೆ ನಡೆಯು ವಾರ್ಡಿನ ಸಮಿತಿ ಸಭೆಗೆ ಆಡಳತ ಮಂಡಳಯ ಅಧಿಕಾರಿಗಳನ್ನು ಸಹಾ ಕರೆಯಲು ಸೂಚಿಸಿರುತ್ತಾರೆ.
- ಇಲ್ತೆತೋಪಿನಲ್ಲಿ ರಸ್ತೆಗೆ ಕಾಂಕ್ರೀಟ್ ಹಾಕುವಾಗಿ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಕಂಬಗಳನ್ನು ಅಳವಡಿಸಲು ಅಗೆದ ಸ್ಥಳವನ್ನು ಈಗಲು ಸಹಾ ಸರಿಪಡಿಸಿರುವುದಿಲ್ಲವೆಂದು ಬೇಸ್ಕಾಂ ಅಧಿಕಾರಿಗಳಗೆ ಹೇಳಿರುತ್ತಾರೆ.

- ವಾರ್ಡಿನ ಮೋಟಪ್ಪನಪಾಳ್ಯ ರಸ್ತೆಗೆ ಕಾಂಕ್ರಿಟ್ ಹಾಕುತ್ತಿರುವಾಗ ಮುನಿಯಪ್ಪನವರ ಮನೆಯ ಮುಂದೆ ಕಾಂಕ್ರಿಟ್ ಹಾಕಿರುವುದಿಲ್ಲ ಇದರಿಂದ ಮಳೆಯ ನೀರು ನಿಂತು ನಾಗರಿಕರಿಗೆ ಸಮಸ್ಯ ಉಂಟಾಗಿರುತ್ತದೆ ಕೂಡಲೆ ಸಹಾಯಕ ಅಭಿಯಂತರರು ಸರಿಪಡಿಸಬೇಕೆಂದು ಸೂಚಿಸಿರುತ್ತಾರೆ.

3. ನೋಡಲ್ ಅಧಿಕಾರಿಯವರು ಮಾತನಾಡುತ್ತಾ ವಾರ್ಡಿನ ರಸ್ತೆಗಲಲ್ಲಿ ಗುಂಡಿ ಬಿದ್ದಿರುವುದನ್ನು ಮುಚ್ಚಲು ಸಹಾಯಕ ಅಭಿಯಂತರರಾದ ಮೂರ್ತಿ ರವರಿಗೆ ತಿಳಸಿದರು ಇಲ್ಲವಾದರೆ ಕ್ರಮವಹಿಸುವುದಾಗಿ ಹೇಳದರು.
4. ನೋಡಲ್ ಅಧಿಕಾರಿಯವರು ಮಾತನಾಡುತ್ತಾ ವಾರ್ಡಿನಲ್ಲಿ ಗ್ಯಾಂಗ್‌ಮ್ಯಾನ್‌ಗಳ ಕೊರತೆ ಇದ್ದು ಇದಕ್ಕೆ ಸಂಬಂಧಿಸಿದಂತೆ ಸಹಾಯಕ ಅಭಿಯಂತರರು ಮೂರ್ತಿ ರವರಿಗೆ ಮೇಲಾಧಿಕಾರಿಗಳಗೆ ಪತ್ರ ಬರೆಯಲು ಹೇಳದರು.
5. ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಆಲ್ವಿನ್ ರವರು ಮಾತನಾಡುತ್ತಾ ತಮ್ಮ ರಸ್ತೆಗೆ ಕಸದ ಆಟೋ ಸರಿಯಾಗಿ ಬರುತ್ತಿಲ್ಲವೆಂದು ಹಾಗೂ ರಸ್ತೆಯನ್ನು ಸಹಾ ಸರಿಯಾಗಿ ಗುಡಿಸುತ್ತಿಲ್ಲವೆಂದು ಹೇಳದರು ಈ ವಿಷಯಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯವರು ಸಹಾಯಕ ಅಭಿಯಂತರರಾದ ಶ್ರೀ ಅಪ್ಪುರಾಜ್ ರವರಿಗೆ ಕ್ರಮವಹಿಸಲು ಹೇಳದರು.
6. ವಾರ್ಡಿನ ಸದಸ್ಯರಾದ ಶ್ರೀಮತಿ ಆಶಾ ಆಲ್ವಿನ್ ರವರು ಮಾತನಾಡುತ್ತ ಮೋಟಪ್ಪನಪಾಳ್ಯದಲ್ಲಿರುವ ಶ್ರೀ ರಾಘವೇಂದ್ರ ದರ್ಶಿನಿ ಸಮಿಪದಲ್ಲಿ BWSSBಯ ಜೆಸಿಬಿಯಿಂದ ಚರಂಡಿಯು ಹೊಡೆದು ಹೋಗಿರುತ್ತದೆಂದು ಕೂಡಲೆ ಸರಿಪಡಿಸಬೇಕೆಂದು ಕೋರಿರುತ್ತಾರೆ. ಸಹಾಯಕ ಅಭಿಯಂತರರು ಶ್ರೀ ಮೂರ್ತಿ ರವರಿಗೆ ಕ್ರಮ ವಹಿಸಲು ಸೂಚಿಸಲಾಗಿದೆ.
7. ವಾರ್ಡಿನ ಸಮಿತಿ ಸದಸ್ಯರಾದ ಶ್ರೀ ಗಣೇಶ್ ರವರು ಮಾತನಾಡುತ್ತಾ BWSSBರವರು ವಾರ್ಡಿನಲ್ಲಿ ಸಮರ್ಪಕವಾಗಿ ಕಾವೇರಿ ನೀರನ್ನು ಬಿಡುತ್ತಿಲ್ಲವೆಂದು ದೂರು ನೀಡಿರುತ್ತಾರೆ ಇದರ ಬಗ್ಗೆ ಕ್ರಮವಹಿಸಲು BWSSB ಅಧಿಕಾರಿಗಳಗೆ ಸೂಚಿಸಿರುತ್ತಾರೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಸಿದರು.

**ನೊಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ–89– ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ**
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ–89 ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು,</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ.